# ಅಪ್ಪನ ಭೇಟಿಗೆ ಹೋದ ಪದ್ಮನಾಭ

ಅಮ್ಮ ವಹಿಸಿದ ದೌತ್ಯದ ಜವಾಬ್ದಾರಿ ಹೊತ್ತು ಯಾವತ್ತೂ ಕಂಡಿರದ ಊರಿಗೆ ಬಸ್ಸಿನಲ್ಲಿ ಬಂದಿಳಿದ ಅನಂತಪದ್ಮನಾಭ ಬಸ್ಸು ಎಬ್ಬಿಸಿ ಹೋದ ಕೆಂಧೂಳಿನ ಪರದೆ ಕರಗುವವರೆಗೆ ನಿಂತಲ್ಲೇ ನಿಂತ. ಕೆಂಗೂದಲಿನ ಎಳಕು ಮೀಸೆಯ ಹದಿನೇಳರ ಹುಡುಗ. ಎರಡೂ ಕೆನ್ನೆಗಳ ಮೇಲೆ ಮೊಡವೆ ಬೊಕ್ಕೆ. ಮುಖದ ಮೇಲೆ ಅಪರಿಚಿತ ಜಾಗಕ್ಕೆ ಬಂದ ಗಲಿಬಿಲಿ. ಹೆಗಲ ಮೇಲಿಂದ ನೇತು ಬಿದ್ದ ಉದ್ದ ಚೀಲವನ್ನು ವಿನಾಕಾರಣ ಜಾರದಂತೆ ಸರಿಪಡಿಸಿಕೊಳ್ಳುತ್ತಾ ನಿಂತವನನ್ನು ಅದೇ ಬಸ್ಸಿನಲ್ಲಿ ಬಂದಿಳಿದಿದ್ದ ಹಳ್ಳಿಗರೊಬ್ಬರು ಕುತೂಹಲದಿಂದ ಗಮನಿಸಿದರು. ಯಾರ ಮನೆಗೆ ಹೋಗ್ಬೇಕೋ ತಮ್ಮಾ? ವಿಚಾರಿಸಿಕೊಂಡರು.

ರಾಮಚಂದ್ರಪ್ಪನೋರ ಮನೆಗೆ..

